their livelihood, how can they pay this charge. I request the Government to abolish this system of collecting the money from the poor ST. and other residents of that area.

ಶ್ರೀ ಎಸ್. ಆರ್. ಬೊಮ್ಮಾಯಿ.—ಅರಣ್ಯ ಮಂತ್ರಿಗಳ ಗಮನಕ್ಕೆ ತಂದು ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುತ್ತೇವೆ

(5) ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯಲ್ಲಿ ಗೊಂದಲ

ಶ್ರೀ ವಟ್ಟಾರಿಗೌಡ ಪಾಟೀಲ್.—ಮಾನ್ಯ ಅಧ್ಯಕ್ಷರೆ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ದಿನಾಂಕ ೭-೨-೮೯ರಂದು ಸಿಂಡಿಕೇಟ್ ಸಭೆಯಲ್ಲಿ ಒಬ್ಬರಿಗೊಬ್ಬರು ಗುದ್ದಾಡಿದ್ದು ಈ ಘಟನೆಯಂ ನಿಜವಾಗಿಯೂ ಮಾನಸ್ಸಿಗೆ ನೋವನ್ನುಂಟುಮಾಡುವಂಥ ಸಂಗತಿ. ಪತ್ರಿಕೆಗಳಲ್ಲಿ ಘಟನೆಯ ವಿವರವೂ ಬಂದಿದ್ದು ಇದನ್ನು ನೋಡಿದಾಗ ವಿದ್ಯಾ ಸಂಸ್ಥೆಗಳ ಸರ್ವೋನ್ನತ ಸಂಸ್ಥೆಯಾಗಿರುವ ವಿಶ್ವವಿದ್ಯಾನಿಲಯದ ಸಭಿಕರು ಇಂಥ ಘಟನೆಗಳಲ್ಲಿ ತೊಡಗಿದರೆ ಸಾರ್ವಜನಿಕರಲ್ಲಿ ವಿಶ್ವವಿದ್ಯಾನಿಲಯದ ಬಗ್ಗೆ ಗೌರವವು ಕಡಿಮೆಯಾಗಿ ವಿದ್ಯಾರ್ಥಿ ವೃಂದದ ಮೇಲೆ ಹಾಗೂ ಸಾರ್ವಜನಿಕರ ಮೇಲೆ ಒಳ್ಳೆಯ ಅಭಿಪ್ರಾಯಂ ಮೂಡುವುದಿಲ್ಲ. ಆದ್ದರಿಂದ ಸರ್ಕಾರದವರು ಈ ಬಗ್ಗೆ ತೆಗೆದುಕೊಂಡಿರುವ ಕ್ರಮಂ ಏನು ? ಹಾಗೂ ತಪ್ಪಿತಸ್ಥರ ಮೇಲೆ ತೆಗೆದುಕೊಂಡಿರುವ ಕ್ರಮ ಹಾಗೂ ಗಲಭೆಯಲ್ಲಿ ಪಾಲ್ಗೊಂಡಿರುವ ಸದಸ್ಯರ ಸದಸ್ಯತ್ವವನ್ನು ರದ್ದುಪಡಿಸಲು ತೆಗೆದುಕೊಂಡಿರುವಕ್ರಮ ಏನು ? ಈ ವಿಷಯದಲ್ಲಿ ಹೇಳಿಕೆ ನೀಡುವಂತೆ ಮಾನ್ಯ ವಿದ್ಯಾ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಈ ವಿಷಯವನ್ನು ವಿದ್ಯಾ ಮಂತ್ರಿಗಳ ಗಮನಕ್ಕೆ ತಂದು ಸೂಕ್ತ ಕ್ರಮ ತೆಗೆದುಕೊಂಡು ಉತ್ತರ ಕೊಡುವುದಕ್ಕೆ ಹೇಳುತ್ತೇನೆ.

(6) ಕ್ಷೇತ್ರದ ಶಾಸಕರನ್ನು ಬಳ್ಳಾರಿ ಆಸ್ಪತ್ರೆ ಸಂದರ್ಶನ ಸಮಿತಿ ಅಧ್ಯಕ್ಷರನ್ನಾಗಿ ಮಾಡುವ ಬಗ್ಗೆ

ಅಧ್ಯಕ್ಷರು.—ರಾಮಪ್ಪನವರೇ, ತಮ್ಮ ಸೂಚನೆ ಓದಿ.

ಶ್ರೀ ಎಂ. ರಾಮಪ್ಪ.—ಸ್ವಾಮಿರಾವ್ ಅವರು ಓದುತ್ತಾರೆ.

ಅಧ್ಯಕ್ಷರು.—ಹಾಗೆ ಓದುವುದಕ್ಕೆ ಬರುವುದಿಲ್ಲ. ನಿಮಗೆ ಓದುವುದಕ್ಕೆ ಬರುವುದಿಲ್ಲವೆ ?

(ಸದಸ್ಯರು ಓದಲಿಲ್ಲ)

ಅಧ್ಯಕ್ಷರು.—ನಾನೇ ಓದುತ್ತೇನೆ ನಿಮ್ಮ ಪರವಾಗಿ. ಬಳ್ಳಾರಿ ಓ.ಪಿ.ಡಿ. ಆಸ್ಪತ್ರೆ ಬಹಳ ದೊಡ್ಡ ಆಸ್ಪತ್ರೆಯಾಗಿದ್ದು ಇದರ ಸಂದರ್ಶನ ಸಮಿತಿಗೆ ಅಧ್ಯಕ್ಷರನ್ನಾಗಿ ಮೊದಲಿನಿಂದಲೂ ಆಯಾ ಕ್ಷೇತ್ರದ ಶಾಸಕರನ್ನೇ ಅಧ್ಯಕ್ಷರನ್ನಾಗಿ ನೇಮಿಸುತ್ತಿದ್ದ ಪ್ರತೀತಿ, ಸಂಪ್ರದಾಯ ಇದ್ದರೂ ಶಾಸಕನಾದ ನನ್ನನ್ನು ಸಂದರ್ಶನ ಸಮಿತಿಯ ಅಧ್ಯಕ್ಷನನ್ನಾಗಿ ಮಾಡದೆ ಸದಸ್ಯನನ್ನಾಗಿ ಮಾಡಿ ಬೇರೆಯವರನ್ನು ಅಧ್ಯಕ್ಷರನ್ನಾಗಿ ನೇಮಿಸುವುದರ ಜೊತೆಗೆ ಒಂದೇ ಜನಾಂಗದ ಐದು ಜನರನ್ನು ಸಮಿತಿಗೆ ಸೇರಿಸಿರುವ ಕಾರಣ ನಾನು ರಾಜೀನಾಮೆಯನ್ನು ಮುಖ್ಯಮಂತ್ರಿಗಳಿಗೆ ಮಂತ್ರಿ ಆರೋಗ್ಯ ಮಂತ್ರಿಗಳಿಗೆ ಕಳುಹಿಸಿರುತ್ತೇನೆ. ಈವರೆಗೂ ನನ್ನ ರಾಜೀನಾಮೆಯನ್ನು ಅಂಗೀಕರಿಸಿಲ್ಲ. ನನ್ನ ಪತ್ರಕ್ಕೆ ಉತ್ತರವನ್ನೂ ಕೊಟ್ಟಿಲ್ಲ. ಈ ವಿಷಯವನ್ನು ಸರಕಾರದ ಗಮನಕ್ಕೆ ಸದನಕ್ಕೆ ಸದನದಲ್ಲಿ ತರುತ್ತಿದ್ದೇವೆ.

ಶ್ರೀ ಎಂ. ಪಿ. ಪ್ರಕಾಶ್ (ಕೃಷಿ ರಾಜ್ಯ ಮಂತ್ರಿ).—ಸನ್ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದು ಗೌರ್ನಮೆಂಟ್ ಆರ್ಡರ್ ಇದೆ. ಯಾವ ಪಾರ್ಟಿಯವರೇ ಇದ್ದರೂ ಅವರನ್ನು ಸಮಿತಿಗೆ ಹಾಕಬೇಕಂ. ನನ್ನನ್ನು ಬಿಟ್ಟು ಬೇರೆ ಯವರನ್ನು ನೇಮಕ ಮಾಡಿದ್ದಾರೆ ಅಲ್ಲದೆ ೫ ಮಂದಿಯೂ ಒಂದೇ ಜಾತಿಯವರಿದ್ದಾರೆ ಎಂದು ಹೇಳುತ್ತಿದ್ದಾರೆ. ಅದನ್ನು ಸರಿಪಡಿಸುತ್ತೇನೆ ಎಂದು ಹೇಳಿ.